# ಔಷಧಿ ಕಂಪೆನಿಗಳ ಭ್ರಷ್ಟಾಚಾರ

ನಾವು ತಿನ್ನುವ ಮಾತ್ರೆ, ಕುಡಿಯುವ ಔಷಧಿ ನಿಜಕ್ಕೂ ಪರಿಣಾಮಕಾರಿಯೆ, ನಮ್ಮ ದೇಹಕ್ಕೆ ಅದು ಅಗತ್ಯವಿದೆಯೆ, ಸೈಡ್ ಎಫೆಕ್ಟ್ ಗಳನ್ನು ಬೀರುವುದಿಲ್ಲವೆ.. ಎಂಬ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಜನಸಾಮಾನ್ಯರಿಗೆ ಸರಳವಾಗಿ ಸಾಧ್ಯ ಆಗುವುದಿಲ್ಲ. ಅದಕ್ಕೆಲ್ಲ ಅವರು ಅವಲಂಬಿಸುವುದು ವೈದ್ಯರನ್ನೇ. ಔಷಧಿ ಕಂಪೆನಿಗಳು ವೈದ್ಯರಿಗೆ ವಿವಿಧ ಆಮಿಷಗಳನ್ನು ಒಡ್ಡುವ ಮೂಲಕ ಇಡೀ ವ್ಯವಸ್ಥೆಯನ್ನು ಕುಲಗೆಡಿಸುವ ಯತ್ನ ನಡೆಸಿವೆ.

'ಟ್ರಾನ್ಸ್‌ಪರೆನ್ಸಿ ಇಂಟರ್‌ನ್ಯಾಷನಲ್' ಸಂಸ್ಥೆಯು ಇತ್ತೀಚೆಗೆ 'ಔಷಧಿ ಕಂಪೆನಿಗಳ ಭ್ರಷ್ಟಾಚಾರ'ದ ಬಗ್ಗೆ ವಿಸ್ತೃತ ವರದಿಯೊಂದನ್ನು ಬಿಡುಗಡೆ ಮಾಡಿದೆ. ಆ ವರದಿಯನ್ನು ಓದಿದರೆ ಗಾಬರಿಯಾಗುತ್ತದೆ. ಬಹುತೇಕ ಜಗತ್ತಿನ ಎಲ್ಲ ದೇಶಗಳಲ್ಲೂ ತಮ್ಮ ಔಷಧಿಗಳ ಮಾರಾಟ ಜಾಲವನ್ನು ವಿಸ್ತರಿಸಿರುವ ಬಹುರಾಷ್ಟ್ರೀಯ ಕಂಪೆನಿಗಳು, ತಾವು ಉತ್ಪಾದಿಸಿದ ಔಷಧಿಗಳನ್ನು ಮಾರಾಟ ಮಾಡಲು ವೈದ್ಯರಿಗೇ ಲಂಚ ಕೊಡುವ ಪದ್ಧತಿಯನ್ನು ಅನುಸರಿಸುತ್ತಿರುವುದು ನಿಜಕ್ಕೂ ಚಿಂತೆಗೀಡು ಮಾಡುವ ವಿಷಯ. ಈ ಕಾರ್ಪೊರೇಟ್ ಕಂಪೆನಿಗಳ ಇಂತಹ ಅಕ್ರಮಗಳನ್ನು ನಿಯಂತ್ರಿಸಲು ಸರ್ಕಾರಗಳಿಗೂ ಸಾಧ್ಯವಾಗುತ್ತಿಲ್ಲ ಎನ್ನುವುದು ಇನ್ನಷ್ಟು ಖೇದದ ಸಂಗತಿ. ನಾವು ತಿನ್ನುವ ಮಾತ್ರೆ, ಕುಡಿಯುವ ಔಷಧಿ ನಿಜಕ್ಕೂ ಪರಿಣಾಮಕಾರಿಯೆ, ನಮ್ಮ ದೇಹಕ್ಕೆ ಅದು ಅಗತ್ಯವಿದೆಯೆ, ಸೈಡ್ ಎಫೆಕ್ಟ್‌ಗಳನ್ನು ಬೀರುವುದಿಲ್ಲವೆ.. ಎಂಬ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಜನಸಾಮಾನ್ಯರಿಗೆ ಸರಳವಾಗಿ ಸಾಧ್ಯ ಆಗುವುದಿಲ್ಲ. ಅದಕ್ಕೆಲ್ಲ ಅವರು ಅವಲಂಬಿಸುವುದು ವೈದ್ಯರನ್ನೇ. ಔಷಧಿ ಕಂಪೆನಿಗಳು ವೈದ್ಯರಿಗೆ ವಿವಿಧ ಆಮಿಷ ಒಡ್ಡುವ ಮೂಲಕ ಇಡೀ ವ್ಯವಸ್ಥೆಯನ್ನು ಕುಲಗೆಡಿಸುವ ಯತ್ನ ನಡೆಸಿವೆ. ಇದು ಒಂದು ಕಂಪೆನಿಯ ಕಥೆಯಲ್ಲ; ವಿವಿಧ ದೇಶಗಳಲ್ಲಿ ಮಾರಾಟ ಜಾಲ ಹೊಂದಿರುವ ಬಹುತೇಕ ಬಹುರಾಷ್ಟ್ರೀಯ ಕಂಪೆನಿಗಳ ಕಥೆಯೂ ಹೌದು.

ಗ್ಲಾಕ್ಸೊಸ್ಮಿಥ್‌ಕ್ಲೈನ್ ಜಗತ್ತಿನ ಏಳನೇ ಅತಿದೊಡ್ಡ ಔಷಧಿ ಉತ್ಪಾದನಾ ಕಂಪೆನಿ. ಕಳೆದ ವರ್ಷ 36,566 ದಶಲಕ್ಷ ಅಮೆರಿಕನ್ ಡಾಲರ್ ಆದಾಯ ಗಳಿಸಿರುವ ಈ ಕಂಪೆನಿ, ಪ್ಯಾರಾಕ್ಸಟೈನ್ (paroxetine) ಎಂಬ ಮಾನಸಿಕ ಒತ್ತಡ ತಡೆಯುವ ಔಷಧಿಯ ಮಾರಾಟದಲ್ಲಿ ಅಕ್ರಮ ಮಾಡಿರುವ ಬಗ್ಗೆ ತನಿಖೆ ನಡೆಯಿತು. ಈ ಔಷಧಿಯನ್ನು 18 ವರ್ಷ ವಯಸ್ಸಿನ ಕೆಳಗಿನ ಮಕ್ಕಳಿಗೆ ಕೊಟ್ಟರೆ, ಮಕ್ಕಳಲ್ಲಿ ಆತ್ಮಹತ್ಯೆ ಪ್ರವೃತ್ತಿ ಹೆಚ್ಚುತ್ತದೆ ಎನ್ನುವ ಅಂಶ ಆ ಕಂಪೆನಿಯ ಸ್ವಂತ ಅಧ್ಯಯನದಿಂದಲೇ ಗೊತ್ತಾಗಿತ್ತು. ಆದರೂ ಔಷಧಿಯನ್ನು ಮಾರಾಟ ಮಾಡುತ್ತಿರುವ ಬಗ್ಗೆ ಮೊಕದ್ದಮೆ ದಾಖಲಾಯಿತು. ಕಳೆದ ವರ್ಷ ತನ್ನ ತಪ್ಪನ್ನು ಒಪ್ಪಿಕೊಂಡ ಈ ಕಂಪೆನಿ 3 ಶತಕೋಟಿ ಡಾಲರ್ ದಂಡ ನೀಡಿ ವ್ಯಾಜ್ಯ ಪರಿಹರಿಸಿಕೊಂಡಿತು. 2013ರಲ್ಲಿ ಜೆನರಿಕ್ ಔಷಧಿ ಉತ್ಪಾದಕ ರ್‍ಯಾನ್‌ಬಕ್ಸಿ ಕಂಪೆನಿ ಕೂಡಾ ತನ್ನ ಉತ್ಪಾದನಾ ಕೇಂದ್ರದಲ್ಲಿ ಕಲಬೆರಕೆ ಔಷಧಿ ತಯಾರಿಸಿದ ಪ್ರಕರಣದಲ್ಲಿ ಸಿಕ್ಕಿಬಿದ್ದಿತ್ತು. ಈ ಪ್ರಕರಣದಲ್ಲಿ ಕಂಪೆನಿ 150 ದಶಲಕ್ಷ ಡಾಲರ್ ದಂಡ ನೀಡಿ ಕೈತೊಳೆದುಕೊಂಡಿತು. 2011ರಲ್ಲಿ ಜಾನ್ಸನ್ ಅಂಡ್ ಜಾನ್ಸನ್ ಕಂಪೆನಿಯು ಗ್ರೀಸ್, ಪೋಲಂಡ್ ಮತ್ತು ರೊಮಾನಿಯಾಗಳಲ್ಲಿ ತನ್ನ ಔಷಧಿಯನ್ನು ಶಿಫಾರಸ್ಸು ಮಾಡಲು ವೈದ್ಯರಿಗೆ ಲಂಚ ನೀಡಿದ ಪ್ರಕರಣದಲ್ಲಿ 70 ದಶಲಕ್ಷ ಡಾಲರ್ ದಂಡ ನೀಡಿತ್ತು.

ಇವು ಬಹಿರಂಗಗೊಂಡಿರುವ ಕೆಲವು ಪ್ರಕರಣಗಳಷ್ಟೆ. ಅಗತ್ಯವೇ ಇಲ್ಲದ ಅಥವಾ ಹಲವಾರು ಸೈಡ್ ಎಫೆಕ್ಟ್‌ಗಳನ್ನು ತಂದೊಡ್ಡುವ ಈ ರೀತಿಯ ನೂರಾರು ಔಷಧಿಗಳು ಮಾರುಕಟ್ಟೆಯಲ್ಲಿ ಚಾಲ್ತಿಯಲ್ಲಿವೆ. ಈ ಎಲ್ಲ ಕಂಪೆನಿಗಳು ನಮ್ಮ ದೇಶದಲ್ಲೂ ಅತ್ಯಂತ ಜನಪ್ರಿಯ ಔಷಧಿಗಳನ್ನು ಮಾರಾಟ ಮಾಡುತ್ತಿವೆ. ಯೂರೋಪ್ ಮತ್ತು ಅಮೆರಿಕದ ದೇಶಗಳಲ್ಲಿ ಔಷಧಿ ಕ್ಷೇತ್ರದಲ್ಲಿ ಕಠಿಣ ಕಾನೂನುಗಳಿವೆ; ಆ ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗುತ್ತದೆ. ಹಾಗಾಗಿ ದಂಡದ ಪ್ರಕರಣಗಳು ಅಲ್ಲಿಂದ ಹೆಚ್ಚು ವರದಿಯಾಗುತ್ತಿವೆ. ನಮ್ಮಲ್ಲಿ ಕಾನೂನುಗಳೇನೋ ಇವೆ; ಆದರೆ ಅವುಗಳ ಜಾರಿ ಪರಿಣಾಮಕಾರಿಯಾಗಿಲ್ಲ. ಇಲ್ಲಿ ರೋಗಿಗಳ ಮತ್ತು ಗ್ರಾಹಕರ ಪರವಾಗಿ ಹೋರಾಟ ನಡೆಸುವವರೂ ದುರ್ಬಲರೇ. ಇತ್ತೀಚೆಗೆ ಕರ್ನಾಟಕದ ಆರೋಗ್ಯ ಇಲಾಖೆಯಲ್ಲಿ ಔಷಧಿಗಳ ಸಗಟು ಖರೀದಿಯಲ್ಲಿ ಭ್ರಷ್ಟಾಚಾರ ನಡೆದಿದೆಯೆಂದು ಮಾಧ್ಯಮಗಳಲ್ಲಿ ದೊಡ್ಡ ಸುದ್ದಿಯಾಯಿತು. ಖುದ್ದಾಗಿ ಆರೋಗ್ಯ ಸಚಿವರೇ ಸರ್ಕಾರಿ ಗೋದಾಮುಗಳಿಗೆ ದಾಳಿ ಮಾಡಿದಾಗ ಭಾರೀ ಪ್ರಮಾಣದ 'ಬಳಕೆ ಅವಧಿ ಮುಗಿದಿರುವ' ಔಷಧಿಗಳು ಪತ್ತೆಯಾದವು. ಆದರೆ ಸರ್ಕಾರಿ ಆಸ್ಪತ್ರೆಗಳಲ್ಲಿ ಇಂತಹ 'ಡೇಟ್ ಬಾರ್' ಆದ ಎಷ್ಟು ಪ್ರಮಾಣದ ಔಷಧಿಗಳು ಈಗಾಗಲೆ ಚಲಾವಣೆಯಾಗಿವೆ ಎನ್ನುವ ಬಗ್ಗೆ ವಿವರಗಳು ಗೊತ್ತಾಗಲಿಲ್ಲ.

ಬಹುರಾಷ್ಟ್ರೀಯ ಕಂಪೆನಿಗಳು ವೈದ್ಯರಿಗೆ ನೇರವಾಗಿ ಆಮಿಷ ಒಡ್ಡಿ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಿಸುತ್ತವೆ. ನೈತಿಕ ನಿಲುವನ್ನು ಇಟ್ಟುಕೊಂಡು ಆಮಿಷಕ್ಕೆ ಬಲಿಯಾಗದೆ ಕರ್ತವ್ಯ ನಿರ್ವಹಿಸುವ ವೈದ್ಯರ ಸಂಖ್ಯೆ ಕಡಿಮೆಯಾಗುತ್ತಿದೆ. ಕಂಪೆನಿಗಳು ವೈದ್ಯರಿಗೆ ವಿದೇಶ ಪ್ರವಾಸ, ವಿಶೇಷ ಕೊಡುಗೆಗಳ ಮೂಲಕ ತಮ್ಮ ಮಾತ್ರೆಗಳನ್ನೇ ಶಿಫಾರಸು ಮಾಡಲು ಹಚ್ಚುತ್ತವೆ. ಇದೊಂದು ರೀತಿಯಲ್ಲಿ ಅಪರಾಧ ಎನ್ನುವ ಆಲೋಚನೆಯೂ ಇತ್ತೀಚಿನ ವೈದ್ಯರಲ್ಲಿ ಹುಟ್ಟುವುದಿಲ್ಲ; ವೈದ್ಯಕ್ಷೇತ್ರದಲ್ಲಿ ಬಳಕೆಯಲ್ಲಿರುವ ಪದ್ಧತಿ ಎಂದೇ ಅವರೂ ತಿಳಿದುಕೊಳ್ಳುತ್ತಾರೆ. ಕಂಪೆನಿಗಳು ಉಚಿತವಾಗಿ 'ಪ್ರಮೋಷನಲ್' ಉದ್ದೇಶಕ್ಕೆ ಕೊಡುವ ಔಷಧಿಗಳೂ ದುಡ್ಡಿಗೆ ಮಾರಾಟವಾಗುತ್ತವೆ. ಹೀಗೆ ಪ್ರಮೋಷನಲ್ ಉದ್ದೇಶಕ್ಕೆ ಔಷಧಿ ಕೊಡುವುದೆಂದರೆ ಇನ್ನೊಂದು ರೀತಿಯಲ್ಲಿ ರೋಗಿಗಳ ಮೇಲೆ 'ಪ್ರಯೋಗ' ಮಾಡಿದಂತೆ. 2004ರಲ್ಲಿ ಅಮೆರಿಕದ ಔಷಧ ಉದ್ಯಮವು, ವೈದ್ಯರನ್ನು ಭೇಟಿ ಮಾಡುವ ಮೆಡಿಕಲ್ ರೆಪ್ರೆಸೆಂಟೇಟಿವ್‌ಗಳ ಮೇಲೆ ಒಟ್ಟು 20.4 ಶತಕೋಟಿ ಡಾಲರ್‌ಗಳನ್ನು ಖರ್ಚು ಮಾಡಿತ್ತಂತೆ! ಆ ವರ್ಷ 15.9 ಶತಕೋಟಿ ಡಾಲರ್ ಹಣವನ್ನು ಸ್ಯಾಂಪಲ್ ಔಷಧಿಗಳ ಮೇಲೆ ಖರ್ಚು ಮಾಡಲಾಗಿದೆ. ಟ್ರಾನ್ಸ್‌ಪರೆನ್ಸಿ ಇಂಟರ್‌ನ್ಯಾಷನಲ್ ಸಂಸ್ಥೆಯು ಇಂತಹ ಹಲವು ವಿವರಗಳನ್ನು ಬಹಿರಂಗೊಳಿಸಿದೆ. ಆದರೆ ಬಹುತೇಕ ದೇಶಗಳಲ್ಲಿ ಇಂತಹ ವಿವರಗಳೂ ಲಭ್ಯವಿಲ್ಲ. ಹಾಗಾಗಿ ವೈದ್ಯರಿಗೆ ಆಮಿಷವೊಡ್ಡುವ ವಿಧಾನಗಳು ಮತ್ತು ಪ್ರಮಾಣದ ಬಗ್ಗೆಯೂ ನಮಗೆ ಸರಿಯಾಗಿ ಗೊತ್ತಾಗುತ್ತಿಲ್ಲ. ನಮ್ಮ ಮಾಧ್ಯಮಗಳು ತುರ್ತಾಗಿ ಗಂಭೀರ ಗಮನ ಹರಿಸಬೇಕಾದ ಕ್ಷೇತ್ರವಿದು. ಜತೆಗೆ ವೈದ್ಯರ ವಿವಿಧ ಸಂಘಟನೆಗಳೂ ನೈತಿಕ ನೆಲೆಯಲ್ಲಿ ಈ ಕುರಿತು ಜನಜಾಗೃತಿಯನ್ನು ಮೂಡಿಸಬೇಕಿದೆ.

■ ಬಿ.ಎಂ.ಹನೀಫ್



ಈಶ್ವರ್